# ಪಾರದರ್ಶಕತೆಗಾಗಿ ಡಿಜಿಟಲ್ ಡೈಲಾಗ್

ಬೆಂಗಳೂರು: ಸರ್ಕಾರದ ಮಾಹಿತಿಗಳು ಜನರಿಗೆ ಏಕೆ ಸುಲಭದಲ್ಲಿ ಸಿಗಲ್ಲ? ಮಾಹಿತಿ ಕೊಡಲು ಇಲಾಖೆಗಳೇಕೆ ಹಿಂದೇಟು ಹಾಕುತ್ತವೆ? ಜನ ಸಾಮಾನ್ಯರ ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡಿಸುವುದು ಮತ್ತು ಮಾಹಿತಿ ಕೊಡಿಸುವ ಮೂಲಕ ಪಾರದರ್ಶಕತೆ ತರಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ ಆಡಳಿತ) ಹೊಸ ಪ್ರಯೋಗಕ್ಕೆ ಕೈಹಾಕಿದೆ.

'ಡಿಜಿಟಲ್ ಡೈಲಾಗ್' ಎಂಬ ಕಲ್ಪನೆಯಲ್ಲಿ ಇಲಾಖೆಗಳು ಮತ್ತು ಜನರ ನಡುವೆ ಸಂಪರ್ಕ ಕಲ್ಪಿಸಿದೆ. ತಿಂಗಳಿಗೆ ಕನಿಷ್ಠ ಒಮ್ಮೆಯಾದರೂ ಸಭೆ ಆಯೋಜಿಸಿ ಜನರ ಅಪೇಕ್ಷೆ ಮತ್ತು ಇಲಾಖೆಗಳಿಂದ ಪರಿಹಾರ ಕೊಡಿಸುವ ಕೆಲಸ ಆರಂಭವಾಗಿದೆ. 40 ಸಾರ್ವಜನಿಕ ಸಂಘಟನೆಗಳು ಸರ್ಕಾರದ ಈ ಪ್ರಯತ್ನದಲ್ಲಿ ತೊಡಗಿಕೊಂಡಿವೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಪ್ರತಿ ಸಭೆಗೂ ಒಂದೋ ಎರಡೋ ಇಲಾಖೆ ಪ್ರಮುಖರನ್ನು ಕರೆಸುತ್ತದೆ. ಜನರು ಸಾಮಾನ್ಯವಾಗಿ ಯಾವ ಮಾಹಿತಿಯನ್ನು ಸುಲಭದಲ್ಲಿ ಪಡೆದುಕೊಳ್ಳಬಯಸುತ್ತಾರೆ ಎಂಬುದು ಸಂಘಟನೆ ಪ್ರಮುಖರಿಂದ ಸಭೆಯಲ್ಲಿ ಪ್ರಸ್ತಾಪವಾಗುತ್ತದೆ. ಇನ್ನೊಂದು ಕಡೆಯಲ್ಲಿರುವ ಇಲಾಖೆ ಪ್ರತಿನಿಧಿಗಳು ಜನರ ಅಪೇಕ್ಷಿತ ಮಾಹಿತಿಗಳು ಸಾರ್ವಜನಿಕವಾಗಿ ಪ್ರಕಟಿಸಲು ಅವಕಾಶವಿದೆಯೋ, ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಒಂದು ವೇಳೆ ಬಹಿರಂಗ ಪಡಿಸಲು ಯಾವುದೇ ತೊಡಕಿಲ್ಲ ಎಂದಾದರೆ ತಾಂತ್ರಿಕ ಸಮಸ್ಯೆಯನ್ನು ಪ್ರಸ್ತಾಪಿಸುತ್ತಾರೆ. ಮುಂದಿನ ಹಂತದಲ್ಲಿ ಇಲಾಖೆಯ ಮಾಹಿತಿ ಕಣಜ ಪೋರ್ಟಲ್‌ಗೆ ಆ ಮಾಹಿತಿಯನ್ನು ಫೆಚ್ ಮಾಡಲಾಗುತ್ತದೆ. ಇಲಾಖೆಯಲ್ಲಿ ಯಾವಾಗೆಲ್ಲ ದಾಖಲೆ ಪರಿಷ್ಕರಿಸಲಾಗುತ್ತದೋ ಆ ಮಾಹಿತಿ ಜನರಿಗೂ ಲಭ್ಯವಾಗುವಂತೆ ಇಗೌರ್ನೆನ್ಸ್ ಕೆಲಸ ಮಾಡುತ್ತದೆ. ಈಗಾಗಲೇ ಡಿಜಿಟಲ್ ಡೈಲಾಗ್‌ನ ಮೂರು ಸಭೆ ನಡೆದಿದೆ. ಹತ್ತಾರು ಮಾಹಿತಿ ಜನರಿಗೆ ಸುಲಭದಲ್ಲಿ ಸಿಗಬೇಕೆಂಬ ಪ್ರಯತ್ನ ಫಲಕೊಟ್ಟಿದೆ.

## ಟೆಂಪ್ಲೇಟ್‌ನಂತೆ ಮಾಹಿತಿ

ಹಲವು ಇಲಾಖೆಗಳು ಕಾಟಾಚಾರಕ್ಕೆ ಅಥವಾ ತಮಗೆ ಅರ್ಥವಾಗುವ ರೀತಿ ಒಂದಷ್ಟು ಮಾಹಿತಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸುತ್ತವೆ. ಜನರಿಗೆ ಅದು ಅರ್ಥವಾಗಲ್ಲ. ಹೀಗಾಗಿ ಡಿಜಿಟಲ್ ಡೈಲಾಗ್‌ನಲ್ಲಿ ಜನರು ಅಪೇಕ್ಷಿಸುವ ಸಾಮಾನ್ಯ ಮಾಹಿತಿ, ಅರ್ಥವಾಗುವ ರೂಪದಲ್ಲಿ ಪ್ರಕಟಿಸುವ ಬಗ್ಗೆ ಚರ್ಚೆಯಾಗುತ್ತದೆ. ಈ ಸಂಬಂಧ ಇಲಾಖೆಗಳಿಗೆ ಟೆಂಪ್ಲೇಟ್ ಅನ್ನು ಇ-ಗೌರ್ನೆನ್ಸ್ ಕಡೆಯಿಂದ ಸಿದ್ಧಮಾಡಿಕೊಡಲಾಗುತ್ತದೆ. ಒಂದು ವೇಳೆ ಡಿಜಿಟಲ್ ಮಾಹಿತಿ ಇಲ್ಲದಿದ್ದರೆ ಅದನ್ನು ರಚಿಸುವ ಬಗ್ಗೆ ಮಾರ್ಗದರ್ಶನ ಮಾಡಲಾಗುತ್ತದೆ.